## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2019-20ನೇ** ಸಾಲಿನಲ್ಲಿ ನವ ರಾಷ್ಟ್ರೀಯ ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರ ಕಾರ್ಯಕ್ರಮ (NNBOMP)ಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಮೂರನೇ ಕಂತಿನ ರಾಜ್ಯ ಸಹಾಯಧನ ಬಿಡುಗಡೆ ಕುರಿತು.

ಓದಲಾಗಿದೆ :
1. ಕೇಂದ್ರ ಸರ್ಕಾರದ E-File No.251/2/2018-Biogas, ದಿನಾಂಕ 14.05.2019.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 25 ಜೈಅಯೋ 2019 ದಿನಾಂಕ 27.05.2019.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 01 ಜೈಅಯೋ 2019, ದಿನಾಂಕ 06.09.2019 ಮತ್ತು 09.08.2019.

**ಪ್ರಸ್ತಾವನೆ :**

**2019-20ನೇ** ಸಾಲಿನಲ್ಲಿ ನವ ರಾಷ್ಟ್ರೀಯ ಜೈವಿಕ ಅನಿಲ ಮತ್ತು ಸಾವಯವ ಗೊಬ್ಬರ (NNBOMP) ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರಾಜ್ಯ ಆಯವ್ಯಯದ **ಲೆಕ್ಕ ಶೀರ್ಷಿಕೆ 2810-60-196-6-01-(Lumpsum)**ರಡಿ **ರೂ.515.00**ಲಕ್ಷಗಳನ್ನು ರಾಜ್ಯ ಸಹಾಯಧನವನ್ನಾಗಿ ಬಿಡುಗಡೆ ಮಾಡಲು ನಿಗದಿಪಡಿಸಿದೆ

ಮೇಲೆ (1)ರಲ್ಲಿ ಓದಲಾದಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ, **2019-20**ನೇ ಸಾಲಿಗೆ ಸಂಬಂಧಿಸಿದಂತೆ ಕಾರ್ಯಕ್ರಮದಡಿ ರಾಜ್ಯಕ್ಕೆ 7000 ಜೈವಾನಿಲ ಸ್ಥಾವರಗಳ ಭೌತಿಕ ಗುರಿ ಹಂಚಿಕೆ ಮಾಡಿದೆ. ಈ ರೀತಿ ಕೇಂದ್ರ ಸರ್ಕಾರವು ಹಂಚಿಕೆ ಮಾಡಿದ ಭೌತಿಕ ಗುರಿಯನ್ನು ಮೇಲೆ ಓದಲಾದ (2)ರಲ್ಲಿ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಿದೆ.

ಇದರನ್ವಯ 2019-20ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಆಯವ್ಯಯದ ಲೆಕ್ಕ ಶೀರ್ಷಿಕೆ **2810-60-196-6-01(Lumpsum)**ರಡಿ ನಿಗದಿಪಡಿಸಿದ **ರೂ.515.00ಲಕ್ಷಗಳಲ್ಲಿ** ಈಗಾಗಲೇ ರೂ.257.50ಲಕ್ಷಗಳ ರಾಜ್ಯ ಸಹಾಯಧನವನ್ನು ಎರಡು ಕಂತುಗಳಲ್ಲಿ ಮೇಲೆ ಓದಲಾದ (3)ರ ಆದೇಶಗಳಲ್ಲಿ ಬಿಡುಗಡೆ ಮಾಡಿದೆ.

ಇನ್ನುಳಿದ ರೂ.257.50ಲಕ್ಷಗಳ ಪೈಕಿ **ಮೂರನೇ ಕಂತಿನ ಅನುದಾನ ರೂ.128.75ಲಕ್ಷಗಳನ್ನು** **2019-20**ನೇ ಸಾಲಿಗೆ ಸಂಬಂಧಿಸಿದಂತೆ ನಿರ್ಮಿಸಲಾದ / ನಿರ್ಮಿಸಲಾಗುವ ಅನಿಲ ಸ್ಥಾವರಗಳಿಗೆ ರಾಜ್ಯ ಸಹಾಯಧನ ಪಾವತಿಸಲು 09 ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/01/ಆರ್‌ಇಪಿ/2019, ಬೆಂಗಳೂರು,**
**ದಿನಾಂಕ 16.12.2019**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2019-20ನೇ ಸಾಲಿಗೆ NNBOMPರಡಿ ಹಂಚಿಕೆ ಮಾಡಿದ ಭೌತಿಕ ಗುರಿಯನ್ವಯ ಪ್ರಗತಿ ಸಾಧಿಸುವ ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಮೂರನೇ ಕಂತಿನ ಅನುದಾನ **ರೂ.128.75ಲಕ್ಷ(ಒಂದು ನೂರಾ ಇಪ್ಪತ್ತೆಂಟು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ರಾಜ್ಯ ಸಹಾಯಧನವನ್ನಾಗಿ ಬಿಡುಗಡೆ ಮಾಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರಸಂ | ಜಿಲ್ಲೆಯ ಹೆಸರು | ಬಿಡುಗಡೆ ಮಾಡಿದ ರಾಜ್ಯ ಅನುದಾನ |
|---|---|---|
| 1 | ಬಾಗಲಕೋಟೆ | 10.50 |
| 2 | ಬೆಳಗಾವಿ | 68.15 |
| 3 | ಚಾಮರಾಜನಗರ | 3.00 |
| 4 | ಚಿತ್ರದುರ್ಗ | 4.80 |
| 5 | ದಾವಣಗೆರೆ | 9.30 |
| 6 | ತುಮಕೂರು | 9.00 |
| 7 | ರಾಮನಗರ | 6.00 |
| 8 | ಶಿವಮೊಗ್ಗ | 6.00 |
| 9 | ಬೀದರ್ | 12.00 |
| | ಒಟ್ಟು | **128.75** |

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪರಿಶೀಲಿಸಿ, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ. **ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ ಬಿಡುಗಡೆ ಮಾಡತಕ್ಕದ್ದು.**

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-60-196-6-01(Lumpsum)**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ 04.07.2019ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದಡಿ ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ದಿನಾಂಕ 28.11.2019ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ರೇವಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಳಗಾವಿ, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ತುಮಕೂರು, ರಾಮನಗರ, ಶಿವಮೊಗ್ಗ ಮತ್ತು ಬೀದರ್.
3. ಇಲಾಖಾ ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.